> ‘ಎಸ್.ಎಲ್. ಭೈರಪ್ಪ ಒಬ್ಬ ಜನಪ್ರಿಯ ಕಾದಂಬರಿಕಾರ’ ಎನ್ನುವ ಡಿ.ಆರ್. ಜನಪ್ರಿಯ ಸಾಹಿತ್ಯ ಕುರಿತು ಮಾಡುವ ವಿಶ್ಲೇಷಣೆ: ‘1. ಒಬ್ಬ ಲೇಖಕ ತೀರ ಸುಲಭವಾಗಿ ಜನಪ್ರಿಯನಾದ ಎಂದರೆ ಆತ ಹೊಸ ರುಚಿಗಳನ್ನು ಸೃಷ್ಟಿಸುತ್ತಿದ್ದಾನೆ ಎನ್ನುವುದಕ್ಕಿಂತ ಒಗ್ಗಿರುವ ರುಚಿಗೇ ಬರೆಯುತ್ತಿದ್ದಾನೆ. 2. ಹೀಗೆ ಜನಪ್ರಿಯವಾಗುವ ಕೃತಿಗಳು ಆ ಜನಾಂಗದ ಮೇಲ್ವದರದ ಅಭಿರುಚಿಯನ್ನು, ಆಲೋಚನಾ ಕ್ರಮವನ್ನು ಬಿಂಬಿಸುತ್ತವೆ; ಇವು ಸರಳ ಮತ್ತು ಮಾದಕವಾಗಿರುತ್ತವೆ.’

ಮೈಸೂರಿನಲ್ಲಿ ನಡೆದ ‘ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ’ದ ಸಭೆಗೆ ಅಪ್ಪನಿಂದ ಹಣ ಪಡೆದು ಹೋದ ಡಿ.ಆರ್. ಬರೆಯುತ್ತಾರೆ: ‘ಕುವೆಂಪು ಭಾಷಣ ನಿಜಕ್ಕೂ ಐತಿಹಾಸಿಕ ಭಾಷಣ. ಯೌವ್ವನದಲ್ಲಿ ಅವರಲ್ಲಿ ಜಾಗೃತವಾಗಿದ್ದ ಶೂದ್ರಪ್ರಜ್ಞೆ, ಮತ್ತೆ ಅವರಲ್ಲಿ ಚೈತನ್ಯ ಉಕ್ಕಿಸುತ್ತಿದೆ’; ‘ಇನ್ನು ಜಿ.ಎಸ್. ಶಿವರುದ್ರಪ್ಪನವರ ಭಾಷಣ. ಇವರಿಗೆ ಯಾವ ತಾತ್ವಿಕ ಹಕ್ಕು ಇದೆ?’ ‘ದೇವನೂರರ ಪರಿಚಯ ಆಯಿತು, ನಿಜಕ್ಕೂ ಗಟ್ಟಿ ಮನುಷ್ಯ.’ ಒಕ್ಕೂಟದ ಸಭೆ ಡಿ.ಆರ್. ಕ್ರಿಯಾಶೀಲರಾಗಲು ಪ್ರೇರಕವಾಗುತ್ತದೆ. ‘ಮೈಸೂರಿನಲ್ಲಿ ನಾನೊಂದು ಅನಿರೀಕ್ಷಿತ ತೀರ್ಮಾನ ಘೋಷಿಸಿದೆ... ನಮ್ಮೂರಿನಲ್ಲಿ ಸಮಾಜವಾದಿ ಯುವಜನ ಸಭಾದ ಶಾಖೆಯೊಂದನ್ನು ತೆರೆಯುವುದು. ದೊಡ್ಡಬಳ್ಳಾಪುರ ನಿಂತ ನೀರಾಗಿದೆ. ಆ ಕೊಳಚೆಯ ಅಸಹ್ಯ ವಾತಾವರಣದಿಂದ ಹೊರಬರುವ ಆಸೆ ಒಬ್ಬಿಬ್ಬರಿಗಾದರೂ ಇದ್ದೀತು. ಅಸ್ತಿತ್ವವಾದಿಗಳ ತರಹ ಮೊದಲು ‘ತೊಡಗುವುದು’. ಅನಂತರ ನೋಡೋಣ. ಯಾವಾಗಲೂ ಮೊದಲು ಸ್ಥಿತಿ ನಿರ್ಮಾಣ ಆಗಬೇಕು. ಅನಂತರ ತತ್ವ.’

ಪಶ್ಚಿಮದ ಅಸ್ತಿತ್ವವಾದದ ಓದು ಇಪ್ಪತ್ತರ ಹರೆಯದ ಈ ಕನ್ನಡ ಲೇಖಕನನ್ನು ಕರ್ನಾಟಕದಲ್ಲಿ ಸಮಾಜವಾದಿ ‘ಸ್ಥಿತಿ’ ನಿರ್ಮಾಣಕ್ಕೆ ಮತ್ತು ‘ತೊಡಗುವಿಕೆ’ಗೆ ಕರೆದೊಯ್ಯುತ್ತದೆ. ಲೇಖಕನೊಬ್ಬ ಅರಿಯುವ ಜಾಗತಿಕ ತತ್ವಗಳು, ಸತ್ಯಗಳು ಅವನ ವ್ಯಕ್ತಿತ್ವದೊಳಗಿಳಿದು, ನಿಧಾನಕ್ಕೆ ಅವನ ನೆಲದ ಭಾಗವಾಗುವ ಅರ್ಥಪೂರ್ಣ ಸಾಂಸ್ಕೃತಿಕ ಬೆಳವಣಿಗೆಗಳಿವು. ದೊಡ್ಡಬಳ್ಳಾಪುರದ ರುಮಾಲೆ ಛತ್ರದ ಮಹಡಿಯಲ್ಲಿ ಗೆಳೆಯರೊಡಗೂಡಿ ‘ಸಾಹಿತ್ಯಿಕ–ಸೈದ್ಧಾಂತಿಕ ಸಂಘಟನೆಗಾಗಿ’ ಸ.ಯು.ಸ ಸ್ಥಾಪಿಸಿದ ಮೇಲೆ, ‘ಆಂದೋಲನ ಪತ್ರಿಕೆಗೆ ಮತ್ತು ಅದರ ಬರಹಗಾರರಿಗೆ’ ಡಿ.ಆರ್. ಪತ್ರ ಬರೆಯುತ್ತಾರೆ: ‘ನೀವು ಬರೆಯಬೇಕಾಗಿರುವುದು ಸ.ಯು.ಸ.ದ, ಈಗ ತಾನೇ ಅರಳುತ್ತಿರುವ, ಗಟ್ಟಿಯಾಗುತ್ತಿರುವ ಯುವಕರಿಗಾಗಿ; ಅದಕ್ಕಾಗಿಯೇ ನಿಮ್ಮ ಲೇಖನಿ ಸರಳವಾಗಿ, ಆದರೂ ಬಲವಾಗಿ ನುಗ್ಗುವ, ಭಾಷೆಯಲ್ಲಿ ವಿಚಾರ ಮಾಡಬೇಕು. ನಮ್ಮಲ್ಲಿ ತಾಕತ್ತಿನ ಗದ್ಯ ಬರೆಯಬಲ್ಲ ಲಂಕೇಶರಂಥ ಬರಹಗಾರರಿದ್ದಾರೆ. ವೈಯಕ್ತಿಕ ಕಚ್ಚಾಟಗಳಿಗಿಂತ ಲೋಹಿಯಾ ಸಿದ್ಧಾಂತವನ್ನೇ ಪೂರ್ಣಗೊಳಿಸುವ ಹಾದಿಯಲ್ಲೇ ನಡೆಯಬೇಕು. ಅದಕ್ಕಾಗಿ ‘ಆಂದೋಲನ’ ಪತ್ರಿಕೆಯಲ್ಲಿ ಒಂದು ನಿರಂತರ ಲೇಖನ ಮಾಲೆ ಪ್ರಾರಂಭಿಸಿ.’

ಅನಂತರ ಡಿ.ಆರ್. 150 ರೂಪಾಯಿಯಲ್ಲಿ ಸ.ಯು.ಸ ಗ್ರಂಥಮಾಲೆ ಆರಂಭಿಸಲು ‘ಧನಸಹಾಯ ಮಾಡಬಲ್ಲವರ’ ಪಟ್ಟಿ ಮಾಡುತ್ತಾರೆ. ತಲಾ 10 ರೂಪಾಯಿ ಕೊಡಬಲ್ಲವರ ಪಟ್ಟಿಯಲ್ಲಿ ಲಂಕೇಶ್, ಮರುಳಸಿದ್ಧಪ್ಪ, ಎಂ.ಡಿ. ನಂಜುಂಡಸ್ವಾಮಿಯವರ ಹೆಸರುಗಳೂ ಇವೆ. ‘ಸ.ಯು.ಸ.ದ ನಾಮಫಲಕ ಬರೆಯಲು ಕೊಟ್ಟೆವು; ಪುಸ್ತಕ ಪ್ರಕಟನೆಯ ನಿರ್ಧಾರ ಮಾಡಿದೆವು’ ಎನ್ನುತ್ತಾ ಡಿ.ಆರ್. ಬರೆಯುತ್ತಾರೆ: ‘ತೀರ್ಮಾನಗಳು–ನಿಶ್ಚಯಗಳ ಮೂಲಕ ನನ್ನನ್ನು ನಾನು